### ಕೌಟುಂಬಿಕ

ಚಂದ್ರ: ಸಾರ್, 'ಸಾವಿರಾರು ವರ್ಷಗಳ ಹಿಂದೆ ನಾವೆಲ್ಲ ಮಂಗಗಳಾಗಿದ್ದೆವು' ಅಂತ ನಮ್ಮಪ್ಪ ಮೊನ್ನೆ ಅಮ್ಮನ ಹತ್ತಿರ ಹೇಳ್ತಿದ್ರು!
ಟೀಚರ್: ಇದು ಗಣಿತದ ತರಗತಿ. ಇಲ್ಲೆಲ್ಲ ನಿಮ್ಮ ಕುಟುಂಬಕ್ಕೆ ಸಂಬಂಧಿಸಿದ ವಿಷಯ ಚರ್ಚಿಸುವಂತಿಲ್ಲ.

### ಕೀಪ್ ಇನ್ ಕೂಲ್

ಡಾಕ್ಟರ್: ಅಲ್ಲಯ್ಯ ನಾನು ಬರೆದುಕೊಟ್ಟ ಟಾನಿಕ್ ಹಾಗೂ ಔಷಧಿ ತೆಗೆದುಕೊಳ್ಳಲೇ ಇಲ್ವೆ?
ರೋಗಿ: ಇಲ್ಲ ಡಾಕ್ಟರ್. ಅವುಗಳ ಮೇಲೆ ಕೀಪ್ ಇನ್ ಕೂಲ್ ಪ್ಲೇಸ್ ಅಂತ ಬರೆದಿತ್ತಲ್ವಾ ಅದಕ್ಕೆ ಅದನ್ನು ಹಾಗೇ ಫ್ರಿಜ್‌ನಲ್ಲಿಟ್ಟಿದ್ದೀನಿ!

### ಧೈರ್ಯ ಬರೋಕೆ

ಗುಂಡ: ಅಲ್ಲಯ್ಯ, ಇಷ್ಟು ಭಿಕ್ಷೆ ಬೇಡಿ ಎಲ್ಲವನ್ನೂ ಹೆಂಡ ಕುಡಿಯೋಕೆ ಕಳೀತಿಯಲ್ಲ?
ಮಂಡ: ಕುಡಿದರೆ ತಾನೇ ಧೈರ್ಯ ಬರೋದು ಸ್ವಾಮಿ?
ಗುಂಡ: ಧೈರ್ಯನಾ? ಯಾತಕ್ಕೆ?
ಮಂಡ: ಭಿಕ್ಷೆ ಬೇಡೋದಿಕ್ಕೆ.




ನಿಷೇಧಾಜ್ಞೆಯಲ್ಲಿ 'ಎಣ್ಣೆ' ಅಂಗಡಿಗಳನ್ನು ಬಂದ್ ಮಾಡಿಸುವ ಹಾಗೆ ಬಣ್ಣದ ಅಂಗಡಿಗಳನ್ನೂ ಬಂದ್ ಮಾಡಿಸಿದರೆ ಪ್ರತಿಮೆಗೆ ಕಪ್ಪು ಬಣ್ಣ ಹಾಕಲು ಆಗುವುದಿಲ್ಲ ಅಲ್ವಾ?

### ಸೊನ್ನೆಗಿಂತ ಕಡಿಮೆ

ವಿದ್ಯಾರ್ಥಿ: ಏನ್ಸಾರ್ ಇದು ಅನ್ಯಾಯ, ನನಗೆ ಗಣಿತದಲ್ಲಿ ಸೊನ್ನೆ ಕೊಟ್ಟಿದ್ದೀರಿ?
ಮೇಷ್ಟ್ರು: ಏನ್ಮಾಡೋದಪ್ಪಾ? ಸೊನ್ನೆಗಿಂತ ಕಡಿಮೆ ಅಂಕವೇ ಇಲ್ಲವಲ್ಲ!

### ನಾಲ್ಕಲ್ಲ, ಐದು

ರಾಮು: ನಿನ್ನೆ ನಮ್ಮ ಡಾಕ್ಟರ್ ಎಷ್ಟು ಆಪರೇಷನ್ ಮಾಡಿದ್ರು. ನಾಲ್ಕು ಇರಬೇಕಲ್ವೇ?
ಭೀಮು: ಇಲ್ಲ ಸಿಸ್ಟರ್, ನಾಲ್ಕಲ್ಲ, ಐದು. ಈಗ ತಾನೇ ಐದು ಹೆಣಗಳನ್ನು ನೋಡಿದೆ!

### ನಿಲ್ದಾಣ

ಗುಂಡ: ವಿಮಾನ ನಿಲ್ದಾಣದಲ್ಲಿ ವಿಮಾನ ಯಾಕೆ ನಿಲ್ಲಿಸುತ್ತಾರೆ?
ಮಂಡ: ಅದಕ್ಕೆ ಕೂರಲು ಬರುವುದಿಲ್ಲವಲ್ಲ, ಅದಕ್ಕೆ!

ಸಂಗ್ರಹ: ಕೆ.ಶ್ರೀನಿವಾಸರಾವ್, ಹರಪನಹಳ್ಳಿ

---

ಗಂಡ ಹೆಂಡತಿಯ ನಡುವೆ ಜಗಳವಾಯ್ತು. ಹೆಂಡತಿ ಜೊತೆ ಗಂಡ ಮಾತು ಬಿಟ್ಟ. ಪತ್ನಿ, 'ಹತ್ತು ಎಣಿಸುತ್ತೇನೆ, ಅಷ್ಟರಲ್ಲಿ ನೀವು ಮಾತನಾಡದಿದ್ರೆ ನಾನು ವಿಷ ಕುಡಿದು ಸಾಯ್ತೀನಿ' ಅಂದ್ಲು. ಪತಿ ಏನು ಹೇಳಲಿಲ್ಲ. ಪತ್ನಿ ಎಣಿಕೆ ಆರಂಭಿಸಿದಳು.
ಒಂದು, ಎರಡು... ಪತಿ ಮೌನ
ಮೂರು, ನಾಲ್ಕು... ಪತಿ ಮೌನ
ಐದು, ಆರು... ಆಗಲೂ ಪತಿ ಮೌನ
ಪತ್ನಿ ಅಳಲು ಶುರುಮಾಡಿದಳು. ಆಗ ಪತಿ, 'ಅಳಬೇಡ ಎಣಿಕೆಯನ್ನು ಮುಂದುವರೆಸು' ಎಂದ. ಪತ್ನಿ ಅಳುವನ್ನು ನಿಲ್ಲಿಸಿ, 'ನೀವು ಮಾತಾಡಿದ್ರಲ್ಲ, ಇನ್ನೇಕೆ ಎಣಿಕೆ ಮುಂದುವರೆಸಲಿ? ನಾನು ವಿಷ ಕುಡಿಯೋದಿಲ್ಲ'!

***

ಇಬ್ಬರು ಕೈದಿಗಳು ಜೈಲಿನಿಂದ ಪರಾರಿಯಾಗಲು ನಿರ್ಧರಿಸಿದರು. ಊಟಕ್ಕಾಗಿ ಹೊರಬಿಟ್ಟಾಗ ನೇರವಾಗಿ ಗೇಟಿನ ಬಳಿ ಹೋಗಿ ಭದ್ರತಾ ಸಿಬ್ಬಂದಿಯನ್ನು ಕೊಂದು ಓಡಿಹೋಗುವುದು ಅವರ ಪ್ಲಾನ್ ಆಗಿತ್ತು. ಪ್ಲಾನ್‌ನಂತೆ ಮರುದಿನ ಅವರು ಗೇಟಿನ ಬಳಿ ಹೋದಾಗ ಗೇಟು ತೆರೆದಿತ್ತು. ಆದರೆ ಅಲ್ಲಿ ಭದ್ರತಾ ಸಿಬ್ಬಂದಿ ಇರಲಿಲ್ಲ. ಅದರಿಂದ ಬೇಜಾರಾದ ಅವರು, 'ಛೇ ಎಂಥ ಕೆಲಸವಾಯ್ತು. ಭದ್ರತಾ ಸಿಬ್ಬಂದಿನೇ ಇಲ್ವಲ್ಲ. ಇನ್ನೊಂದು ದಿನ ಪ್ರಯತ್ನಿಸೋಣ' ಅಂತ ಅಂದುಕೊಂಡು ವಾಪಸ್ ಜೈಲಿನೊಳಗೆ ಹೋದ್ರು!

***

ವ್ಯಾಲೆಂಟೈನ್ಸ್ ಡೇ ಶುರುವಾಗುವ ಒಂದು ವಾರದ ಮೊದ್ಲು ವಕೀಲರೊಬ್ರು 40 ವ್ಯಾಲೆಂಟೈನ್ ಕಾರ್ಡ್‌ಗಳನ್ನು ಖರೀದಿಸಿದರು. ನಂತರ ಅವುಗಳ ಮೇಲೆ, 'ಹೇ ಚಿನ್ನು, ನಾನು ನಿನ್ನ ಪ್ರೀತಿಯ ದೀಪಕ್. ಸಂಜೆ ಸಿಗೋಣ. ಐ ಲವ್ ಯು' ಎಂದು ಬರೆಯತೊಡಗಿದರು. ಅದನ್ನು ಕಂಡ ಗಿಫ್ಟ್ ಸ್ಟೋರ್‌ನ ಮಾಲೀಕ, 'ಯಾಕೆ ಸರ್, ಎಲ್ಲ ಕಾರ್ಡ್‌ಗಳ ಮೇಲೆ ಒಂದೇ ರೀತಿ ಬರೆಯುತ್ತಿದ್ದೀರಿ' ಅಂತ ಪ್ರಶ್ನಿಸಿದ. ಅದ್ಕೆ ಅವರು, 'ಕಳೆದ ಬಾರಿ ಅಕ್ಕಪಕ್ಕದ ಕಾಲೊನಿಗಳ ಕೆಲ ಮನೆಗಳಿಗೆ ಇದೇ ಬಗೆಯ 20 ಕಾರ್ಡ್ ಕಳುಹಿಸಿದ್ದೆ. ಆ ಮನೆಗಳ ಪೈಕಿ ನಾಲ್ಕು ಮಂದಿ ಡೈವೋರ್ಸ್‌ಗಾಗಿ ನನ್ನ ಬಳಿಯೇ ಬಂದಿದ್ದರು. ಈ ಬಾರಿಯೂ ಅದೇ ರೀತಿ ಟ್ರೈ ಮಾಡೋಣ ಅಂತ ಹೀಗೆ ಮಾಡ್ತಾ ಇದ್ದೀನಿ' ಎಂದ!

ಶಿಕ್ಷಕ: ದೇವರ ಮೇಲೆ ವಿಶ್ವಾಸವಿಟ್ಟು ಪರಿಶುದ್ಧ ಮನಸ್ಸಿನಿಂದ ಪ್ರಾರ್ಥಿಸಿದ್ರೆ ಬಯಸಿದ್ದೆಲ್ಲ ಸಿಗುತ್ತೆ.
ವಿದ್ಯಾರ್ಥಿ: ಬಿಡಿ ಸಾರ್, ಅದು ನಿಜವೇ ಆಗಿದ್ದಿದ್ರೆ ಈ ವೇಳೆಗೆ ನೀವು ನನ್ನ ಸರ್ ಅಲ್ಲ, ಮಾವ ಆಗಿರ್ತಿದ್ರಿ.

***

ಶಿಕ್ಷಕಿ: ನಾನು ಸುಂದರವಾಗಿದ್ದೆ, ನಾನು ಸುಂದರವಾಗಿದ್ದೇನೆ, ನಾನು ಸುಂದರವಾಗಿ ಇರುವೆ. ಇದೇ ರೀತಿ ಮೂರು ಕಾಲಗಳನ್ನು ತಿಳಿಸೊ ಉದಾಹರಣೆ ನೀಡಿ.
ವಿದ್ಯಾರ್ಥಿ: ನಾನು ಭ್ರಮೆಯಲ್ಲಿದ್ದೆ, ನಾನು ಭ್ರಮೆಯಲ್ಲಿದ್ದೇನೆ. ನಾನು ಭ್ರಮೆಯಲ್ಲಿರುವೆ.

***

ಸೇಲ್ಸ್‌ಮನ್: ಪ್ರತಿ ರಾತ್ರಿ ತಡವಾಗಿ ಮನೆಗೆ ಬರುವ 'ಪತಿ ಹೇಳುವ 200 ಸಬೂಬುಗಳು' ಎಂಬ ಪುಸ್ತಕದ ಒಂದು ಪ್ರತಿ ಕೊಳ್ಳುವಿರಾ?
ಗೃಹಿಣಿ: ನನಗೆ ಆ ಪುಸ್ತಕ ಅವಶ್ಯಕತೆ ಇದೆ ಅಂತ ನೀವು ಹೇಗೆ ಭಾವಿಸಿದ್ರಿ?
ಸೇಲ್ಸ್‌ಮನ್: ಇದೇ ಪುಸ್ತಕದ ಪ್ರತಿಯನ್ನು ಬೆಳಿಗ್ಗೆ ನಿಮ್ಮ ಪತಿಗೆ ಮಾರಿದ್ದೇನೆ.

***

ಬಾಬಾ: ಇಷ್ಟು ಎಣ್ಣೆ ಹಾಕಿದ್ರೆ ಸತ್ತಮೇಲೆ ನೀನು ಸೀದಾ ನರಕಕ್ಕೆ ಹೋಗ್ತಿಯ.
ಕುಡುಕ: ಕುಡಿಯುವ ನಾನೇ ನರಕಕ್ಕೆ ಹೋದ್ರೆ ಎಣ್ಣೆ ಮಾರುವ ಬಾರ್‌ನವ್ನು ಏನಾಗ್ತಾನೆ?
ಬಾಬಾ: ಅವ್ನೂ ನರಕಕ್ಕೆ ಹೋಗ್ತಾನೆ.
ಕುಡುಕ: ಬಾರ್ ಎದುರು ಬೊಂಡಾ–ಭಜ್ಜಿ ಮಾರುವ ಹೆಂಗ್ಸು?
ಬಾಬಾ: ಅವ್ಳೂ ನರಕಕ್ಕೆ ಹೋಗ್ತಾಳೆ
ಕುಡುಕ: ಅವ್ರಿಬ್ರೂ ನರಕದಲ್ಲಿ ಸಿಗೋದಾದ್ರೆ ನನಗಿನ್ನೇನು ತೊಂದ್ರೆ ಅಲ್ಲಿ!

ಸಂಗ್ರಹ: ಮುರಲೀಧರ ಕುಲಕರ್ಣಿ, ಬೀದರ್